ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ.,
ನ್ಯಾಯಾಲಯ, ಚಿಕ್ಕಮಗಳೂರು.
ಸಿ.ಸಿ.693/2023

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಗಣೇಶ | ಪಿ.ಡಬ್ಲ್ಯೂ.6 |
| ತಂದೆಯ ಹೆಸರು | : | ಕೃಷ್ಣೇಗೌಡ | ಸಿ.ಡಬ್ಲ್ಯೂ.12 |
| ವಯಸ್ಸು | : | 30 ವರ್ಷ | |
| ವೃತ್ತಿ | : | ಕೂಲಿ ಕೆಲಸ | |
| ವಾಸ | : | ಹಳೆಬಂಡಿಮಠ ರಸ್ತೆ, ಚಿಕ್ಕಮಗಳೂರು | |

ದಿನಾಂಕಃ 08-01-2025 ರಂದು ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ-

ಚಾಸಾ-11 ರವರು ನನಗೆ ಗೊತ್ತಿಲ್ಲ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನನಗೆ ಯಾವುದೇ ಮಾಹಿತಿ ಇಲ್ಲ. ಸಾಕ್ಷಿಗೆ ನೋಟೀಸ್ ಮತ್ತು ಮಹಜರ್ ಅನ್ನ ತೋರಿಸಲಾಗಿ ಅವುಗಳ ಮೇಲೆ ಇರುವ ತನ್ನ ಸಹಿಗಳನ್ನ ನೋಡಿ ಗುರುತಿಸಿದ್ದಾರೆ. ನೋಟೀಸ್ ಅನ್ನ ನಿಪಿ-21 ಎಂದು ಹಾಗೂ ಸಾಕ್ಷಿಯ ಸಹಿಯನ್ನ ನಿಪಿ-21(ಎ) ಎಂದು ಗುರುತಿಸಲಾಯಿತು. ಮಹಜರ್ ಅನ್ನ ಈಗಾಗಲೇ ನಿಪಿ-7 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನ ನಿಪಿ-7(ಬಿ) ಎಂದು ಗುರುತಿಸಲಾಯಿತು. ನಿಪಿ-7 ಮತ್ತು ನಿಪಿ-21 ರಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿಗೆ 2 ಫೋಟೋಗಳನ್ನ ತೋರಿಸಲಾಗಿ ಅವುಗಳನ್ನ ನೋಡಿ ಗುರುತಿಸಿದ್ದಾರೆ. ಅವುಗಳನ್ನ ಈಗಾಗಲೇ ನಿಪಿ-8 ಮತ್ತು 9 ಎಂದು ಗುರುತಿಸಲಾಗಿದೆ. ನಿಪಿ-8 ಮತ್ತು ನಿಪಿ-9 ರ ಫೋಟೋಗಳನ್ನ ಯಾವ ಉದ್ದೇಶದಿಂದ ತೆಗೆಯಲಾಗಿದೆ ಎಂದು ನನಗೆ

ಗೊತ್ತಿಲ್ಲ. ನಿಪಿ-7 ರ ಮೇಲೆ ಸಹಿ ಮಾಡಿದ ಕಾಲಕ್ಕೆ ನಾನು ಯಾವುದೇ ಬೈಕ್ ಅನ್ನ ನೋಡಿಲ್ಲ.

(ಈ ಹಂತದಲ್ಲಿ ಎಪಿಪಿರವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಯನ್ನು ನೀಡಲಾಯಿತು)

<u>ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದಃ-</u>

ದಿಃ05.05.2022 ರಂದು ಸಂಜೆಃ05.00 ರಿಂದ 06.00 ರವರೆಗೆ ನನ್ನ ಮತ್ತು ಚಾಸಾ-11 ರವರ ಸಮಕ್ಷಮದಲ್ಲಿ ನಿಪಿ-7 ರಂತೆ ಮಹಜರ್ ಬರೆಯಲಾಯಿತು ಎಂದರೆ ಸರಿಯಲ್ಲ. ಆ ಕಾಲಕ್ಕೆ ದ್ವಿಚಕ್ರ ವಾಹನಗಳನ್ನ ಗುರುತು ಕವಾಯತು ಮಾಡಿಸಲಾಯಿತು ಎಂದರೆ ಸರಿಯಲ್ಲ. ನನಗೆ ಈ ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿ ಇದ್ದರೂ ಆರೋಪಿತರಿಗೆ ಸಹಾಯ ಮಾಡಬೇಕೆಂದು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ 1 ಮತ್ತು 2 ನೇ ಆರೋಪಿಗಳ ಪರಃ ಶ್ರೀ ಸಿ.ಎಸ್.ಕೆ. ವಕೀಲರಿಂದಃ-</u>

ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.

<u>ಮರು ಸವಾಲುಃ ಇಲ್ಲಾ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃಎಃಒಃ

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಸಿ.ಜೆ.ಎಂ.,ಚಿಕ್ಕಮಗಳೂರು.

C.C.No.693/2023
PW-6 CW-12

ಎಸ್‌ಆರ್ಃ